# ಜ್ಞಾನೋದಯದ ಮಾರ್ಗದಲ್ಲಿ

ಒಮ್ಮೆ ಬುದ್ಧ ಭಗವಾನರು ಕೋಸಾಂಬಿಗೆ ಹೋಗಲು ಈಶಾನ್ಯ ದಿಕ್ಕಿನತ್ತ ಚಲಿಸುತ್ತಿದ್ದ ಗಂಗಾ ನದಿಯ ತಟದಲ್ಲಿ ಸಾಗುತ್ತಿದ್ದರು. ನದಿಯ ಕೆಳಹರಿವಿನಲ್ಲಿ ಕೊಚ್ಚಿಹೋಗುತ್ತಿದ್ದ ಮರದ ದಿಮ್ಮಿಯೊಂದನ್ನು ಕಂಡು ಕ್ಷಣಕಾಲ ನಿಂತು ಭಿಕ್ಕುಗಳನ್ನು ಉದ್ದೇಶಿಸಿ ಹೀಗೆ ಹೇಳಿದರು: ಭಿಕ್ಕುಗಳೆ, ಆ ಮರದ ತುಂಡು ನದಿಯ ದಂಡೆಯಲ್ಲಿ ಸಿಕ್ಕಿಹಾಕಿಕೊಳ್ಳದಿದ್ದರೆ, ಅಥವಾ ಮುಳುಗದಿದ್ದರೆ, ಒಂದುವೇಳೆ ಮರಳ ಕಟ್ಟೆಗೆ ಕಟ್ಟಿಹಾಕದಿದ್ದರೆ ಅಥವಾ ಅದನ್ನು ನೀರಿನಿಂದ ಹೊರಗೆ ತೆಗೆದುಹಾಕದಿದ್ದರೆ, ನೀರಿನ ಸುಳಿಗೆ ಸಿಲುಕದಿದ್ದರೆ ಅಥವಾ ಒಳಗಿನಿಂದಲೇ ಕೊಳೆತು ಹೋಗದಿದ್ದರೆ– ಅದು ಸಮುದ್ರದವರೆಗೂ ಹಾಗೆಯೆ ತೇಲಿಕೊಂಡುಹೋಗುತ್ತದೆ. ನೀವೂ ಹಾಗೆಯೆ. ನದಿಯ ದಂಡೆಯಲ್ಲಿ ಸಿಕ್ಕಿಹಾಕಿಕೊಳ್ಳದಿದ್ದರೆ, ಮುಳುಗದಿದ್ದರೆ, ಮರಳಕಟ್ಟೆಯಲ್ಲಿ ಕಟ್ಟಿಹಾಕಲ್ಪಡದೇ ಇದ್ದರೆ, ನೀರಿನಿಂದ ಹೊರತೆಗೆಯದಿದ್ದರೆ, ಸುಳಿಯಲ್ಲಿ ಸಿಲುಕದಿದ್ದರೆ, ಒಳಗಿನಿಂದಲೇ ಕೊಳೆತುಹೋಗದಿದ್ದರೆ– ಖಂಡಿತವಾಗಿಯೂ ನೀವು ಜ್ಞಾನೋದಯ ಮತ್ತು ಮುಕ್ತಿಯೆಂಬ ಮಹಾಸಮುದ್ರವನ್ನು ಸೇರುತ್ತೀರಿ.

ಭಿಕ್ಕುಗಳು ಹೇಳಿದರು; ಭಗವಾನರೆ, ದಯವಿಟ್ಟು ಇದನ್ನು ಬಿಡಿಸಿ ಹೇಳಿ. ನದಿಯ ದಂಡೆಯಲ್ಲಿ ಸಿಕ್ಕಿಹಾಕಿಕೊಳ್ಳುವುದು, ನೀರಿನಲ್ಲಿ ಮುಳುಗುವುದು ಮತ್ತು ಮರಳಕಟ್ಟೆಯಲ್ಲಿ ಕಟ್ಟಿಹಾಕುವುದು ಎಂದರೆ ಏನು?

ಬುದ್ಧರು ಹೀಗೆ ಹೇಳಿದರು: ಭಿಕ್ಕುಗಳೆ, ನದಿಯ ದಂಡೆಯಲ್ಲಿ ಸಿಲುಕುವುದು ಎಂದರೆ ಆರು ಇಂದ್ರಿಯಗಳು (senses) ಮತ್ತು ಅವುಗಳ ಆಯತನಗಳಿಗೆ (objects) ಜೋತುಬೀಳುವುದು. ನೀವು ದಮ್ಮವನ್ನು ಎಚ್ಚರದಿಂದ ಪಾಲಿಸಿದರೆ ಭಾವನೆಗಳಿಗೆ ಕಟ್ಟುಬೀಳುವುದಿಲ್ಲ. ಭಾವನೆಗಳಿಗೆ ಕಟ್ಟುಬಿದ್ದರೆ ಇಂದ್ರಿಯ ಮತ್ತು ಇಂದ್ರಿಯಾಯತನಗಳು ಕೂಡಿದಾಗ ಉಂಟಾಗುವ ಪರಿಣಾಮ ನಿಮ್ಮನ್ನು ದಾರಿತಪ್ಪಿಸುತ್ತದೆ. ಮುಳುಗುವುದೆಂದರೆ ಆಸೆ ಮತ್ತು ಲೋಭಕ್ಕೆ ಗುಲಾಮರಾಗುವುದು. ಅದು ನಿಮ್ಮ ಅಭ್ಯಾಸಕ್ಕೆ ಅಗತ್ಯವಾಗಿರುವ ಸಂಕಲ್ಪ ಶಕ್ತಿಯನ್ನೆ ನಾಶಮಾಡುತ್ತದೆ. ಮರಳು ಕಟ್ಟೆಯಲ್ಲಿ ಕಟ್ಟಿಹಾಕುವುದೆಂದರೆ ನಿಮ್ಮ ಬಗ್ಗೆಯೆ ಸದಾ ಚಿಂತಿಸುತ್ತಿರುವುದು, ಸ್ವಾರ್ಥಪರ ಅನುಕೂಲ, ಪ್ರತಿಷ್ಠೆಗಾಗಿ ಹೋರಾಡುವುದು. ಜ್ಞಾನೋದಯದ ಗುರಿಯನ್ನೆ ಮರೆಯುವುದು. ನೀರಿನಿಂದ ಹೊರತೆಗೆಯುವುದು ಎಂದರೆ ಚಂಚಲತೆಯಲ್ಲಿ ಕಳೆದುಹೋಗುವುದು. ದಮ್ಮಪಾಲನೆಯನ್ನು ಮರೆತು ಅನರ್ಹರೊಡನೆ ಅಲೆಯುತ್ತಿರುವುದು. ಸುಳಿಯಲ್ಲಿ ಸಿಲುಕುವುದೆಂದರೆ ಐದು ತೆರನಾದ ತೃಷ್ಣೆಗಳಾದ– ರುಚಿಯಾದ ಆಹಾರ, ಕಾಮಾಸಕ್ತಿ, ಹಣ, ಕೀರ್ತಿ ಮತ್ತು ಅತಿಯಾದ ನಿದ್ದೆ ಇವುಗಳಿಂದ ಬಂಧಿಸಲ್ಪಡುವುದು. ಒಳಗಿನಿಂದಲೇ ಕೊಳೆತು ಹೋಗುವುದು ಎಂದರೆ ಹುಸಿ ಪ್ರತಿಷ್ಠೆಯಿಂದ ಬದುಕುವುದು, ಸಂಘಕ್ಕೆ ದ್ರೋಹ ಬಗೆಯುವುದು, ಧರ್ಮವನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುವುದು.

ಭಿಕ್ಕುಗಳೆ, ನೀವು ಸದಾ ಜಾಗೃತರಾಗಿದ್ದು ಈ ಆರು ಜಾಲಗಳಿಂದ ತಪ್ಪಿಸಿಕೊಂಡರೆ ಮರದ ದಿಮ್ಮಿಯು ಈ ಎಲ್ಲ ಅಡಚಣೆಗಳನ್ನು ಮೀರಿದಾಗ ಹೇಗೆ ಸಮುದ್ರ ಸೇರುತ್ತದೆಯೊ ಹಾಗೆ ನೀವು ಖಂಡಿತವಾಗಿಯೂ ಜ್ಞಾನೋದಯವನ್ನು ಪಡೆದು ನಿರ್ವಾಣ ಹೊಂದುತ್ತೀರಿ.

ಬುದ್ಧ ತನ್ನ ಶಿಷ್ಯರಿಗೆ ಇದನ್ನು ಹೇಳುತ್ತಿರುವಾಗ ಎಮ್ಮೆಗಳನ್ನು ಕಾಯುತ್ತಿದ್ದ ಯುವಕನೊಬ್ಬ ಕೇಳಿಸಿಕೊಳ್ಳುತ್ತಿದ್ದ. ಅವನ ಹೆಸರು ನಂದ. ಬುದ್ಧನ ಮಾತುಗಳಿಂದ ಅವನು ಭಾವಪರವಶನಾಗಿದ್ದ. ಭಿಕ್ಕುಗಳ ಬಳಿ ಬಂದು ತನ್ನನ್ನು ಶಿಷ್ಯನಾಗಿ ಒಪ್ಪಿಕೊಳ್ಳುವಂತೆ ಕೇಳಿಕೊಂಡ. ಗುರುಗಳೆ, ನಾನೂ ಸಹ ಈ ಸಹೋದರರಂತೆ ಭಿಕ್ಕುವಾಗಬೇಕೆಂಬ ಆಸೆಯಾಗುತ್ತಿದೆ. ಧರ್ಮಮಾರ್ಗದಲ್ಲಿ ನಡೆಯಲು ನನ್ನ ಜೀವನವನ್ನು ಮುಡಿಪಾಗಿಡುತ್ತೇನೆ. ನಾನು ನದಿಯ ದಂಡೆಯಲ್ಲಿ ಸಿಕ್ಕಿಹಾಕಿಕೊಳ್ಳುವುದಿಲ್ಲ, ಮುಳುಗುವುದಿಲ್ಲ, ಮರಳುಕಟ್ಟೆಯಲ್ಲಿ ಕಟ್ಟಿಸಿಕೊಳ್ಳುವುದಿಲ್ಲ, ನೀರಿನಿಂದ ಹೊರಬರುವುದಿಲ್ಲ, ಸುಳಿಯಲ್ಲಿ ಸಿಲುಕುವುದಿಲ್ಲ ಮತ್ತು ಒಳಗಿನಿಂದಲೇ ಕೊಳೆಯುವುದಿಲ್ಲ. ದಯವಿಟ್ಟು ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಎಂದು ಬೇಡಿಕೊಂಡ.

ಬುದ್ಧರಿಗೆ ಯುವಕನ ಹೊಳೆಯುವ ಮುಖಭಾವವನ್ನು ನೋಡಿ ಆನಂದವಾಯಿತು. ಯುವಕ, ನಿನ್ನ ವಯಸ್ಸೆಷ್ಟು? ಎಂದು ಕೇಳಿದರು. 'ಹದಿನಾರು' ಹೇಳಿದ ನಂದ. ನಿನ್ನ ತಂದೆ ತಾಯಿಗಳು? 'ಇಲ್ಲ' ಎಂದ. ದಿನಕ್ಕೆ ಒಂದು ಹೊತ್ತಿನ ಊಟದಲ್ಲಿ ಇರಬಲ್ಲೆಯಾ? ಕೇಳಿದರು ಬುದ್ಧ. ಈಗ ನನಗೆ ಸಿಗುತ್ತಿರುವುದು ಅಷ್ಟೆ. ನಂದ ಉತ್ತರಿಸಿದ. ನಮ್ಮ ನಿಯಮದ ಪ್ರಕಾರ ಸಂಘಕ್ಕೆ ಪ್ರವೇಶ ಪಡೆಯಲು ನಿನಗೆ ಇಪ್ಪತ್ತು ವರ್ಷಗಳು ತುಂಬಬೇಕು. ಆದರೆ ನಿನ್ನ ನಿಷ್ಠೆ, ಅರ್ಪಣಾ ಭಾವವನ್ನು ನೋಡಿದರೆ ಆ ನಿಯಮವನ್ನು ಸಡಿಲಿಸಬೇಕೆನಿಸುತ್ತದೆ. ಎಮ್ಮೆಗಳನ್ನು ಕೊಟ್ಟಿಗೆಗೆ ಹಿಂದಿರುಗಿಸಿ ಒಡೆಯನ ಅಪ್ಪಣೆಯನ್ನು ಪಡೆದು ಬಾ ಎಂದರು. ನಂದ ನಗುನಗುತ್ತಾ ನಾನು ಬರುವವರೆಗೂ ಕಾಯುವಿರಿ ತಾನೆ? ಎಂದು ಹೊರಟ.

■ ಮೂಚಿ

## ಮಾತೇ ಮುತ್ತು

★ ನಡೆವರೆಡಹದೆ ಕುಳಿತರೆಡಹುವರೆ?
-ರಾಘವಾಂಕ

★ ಆಳಾಗ ಬಲ್ಲವನು, ಆಳುವನು ಅರಸಾಗಿ/ ಆಳಾಗಿ ಬಾಳಲರಿಯದವನು/ ಹಾಳಾಗಿ ಹೋಗುವನು ಸರ್ವಜ್ಞ.
-ಸರ್ವಜ್ಞ

★ ಹೆಣ್ಣಿಗೆ ಗಂಡು ಮಾಯೆ, ಗಂಡಿಗೆ ಹೆಣ್ಣು ಮಾಯೆ.
-ಅಕ್ಕಮಹಾದೇವಿ

★ ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ, ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದೂರ್ವಾಸ ಮುಚ್ಚಿಗ, ಕಾಶ್ಯಪ ಕಮ್ಮಾರ.
-ಬಸವಣ್ಣ

★ ಯಾವ ಉದ್ದೇಶವೂ ಇಲ್ಲದೆ, ಪರರನ್ನು ಕಾಪಾಡುವುದು ಸಜ್ಜನರ ಸಹಜ ಗುಣ.
-ಕ್ಷೇತ್ರ ಚೂಡಾಮಣಿ

★ ಗಣನೆಗೇ ಬಾರದೆ ಇರುವುದಕ್ಕಿಂತ ಟೀಕೆಗೆ ಗುರಿಯಾಗುವುದು ಮೇಲು.
-ಜಾನ್‌ಸನ್

★ ಔಷಧೀಯ ಚಿಕಿತ್ಸೆಗಿಂತ ಕ್ರಮಬದ್ಧವಾದ ಆಹಾರ ಚಿಕಿತ್ಸೆ ಲೇಸು.
-ಇಂಗ್ಲೆಂಡ್ ಗಾದೆ

★ ನೋಡುವುದಕ್ಕಿಂತ ಹೆಚ್ಚಾಗಿ ಅರ್ಥ ಮಾಡಿಕೊಳ್ಳಿ; ಕೇಳುವುದಕ್ಕಿಂತ ಹೆಚ್ಚಾಗಿ ಅರಿತುಕೊಳ್ಳಿ; ಓದುವುದಕ್ಕಿಂತ ಹೆಚ್ಚಾಗಿ ಮನದಟ್ಟು ಮಾಡಿಕೊಳ್ಳಿ; ನೆನಪು ಮಾಡಿಕೊಳ್ಳುವುದಕ್ಕಿಂತ ಹೆಚ್ಚಾಗಿ ಶ್ರದ್ಧೆಯಿಂದ ಕೆಲಸಕ್ಕೆ ಕೈಹಚ್ಚಿ.
-ಬಯ್ರೋ

★ ಸರಿಯಾದ ರೀತಿಯಲ್ಲಿ ಬಳಸದಿದ್ದರೆ ಒಳ್ಳೆಯ ಗುಣವೇ ಬಾರಿ ಕೆಟ್ಟದಾಗುತ್ತದೆ.
-ಶೇಕ್ಸ್‌ಪಿಯರ್

★ ಸಾಮಾನ್ಯ ಜನರ ಬಾಯಲ್ಲಿ ಕಾವ್ಯ ಹರಿದಾಡುವುದೇ ಕವಿಗೆ ಸಿಗುವ ನೊಬೆಲ್ ಪ್ರಶಸ್ತಿ.
-ಹಿರೇಮಗಳೂರು ಕಣ್ಣನ್

★ ಕುಟುಂಬದ ಎಲ್ಲ ಸದಸ್ಯರೂ ತಾವು ಕೂಡಿಡುವ ಕಸವನ್ನು ಸುರಿಯುವುದು ಯಜಮಾನ ಹೊತ್ತಿರುವ ಕಸದ ಬುಟ್ಟಿಗೇ!
-ಆಫ್ರಿಕನ್ ಗಾದೆ

★ ವಾಗ್ದಾನ ಪೂರ್ಣಚಂದ್ರನಂತೆ; ಒಡನೆಯೇ ನೆರವೇರಿಸದೆ ಬಿಟ್ಟರೆ, ಅದು ದಿನದಿಂದ ದಿನಕ್ಕೆ ಕ್ಷೀಣಿಸುತ್ತ ಹೋಗುತ್ತದೆ.
-ಜರ್ಮನಿ ಗಾದೆ

★ ಏನೂ ಮಾಡದಿರುವುದು ತಪ್ಪು ಮಾಡುವುದಕ್ಕೆ ದೊರಕುವ ಅವಕಾಶ.
-ಅಜ್ಞಾತ

★ ಬುದ್ಧಿವಾದ ಎಲ್ಲರಿಗೂ ದೊರಕುತ್ತದೆ; ಅದರ ಲಾಭ ಪಡೆಯುವವರು ಕೆಲವೇ ಮಂದಿ!
-ಸೈರಸ್